## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಚಳ್ಳಕೆರೆ.

## ಸಿ.ಸಿ. ನಂ.157/2023

ಪ್ರಮಾಣ ವಚನ ಬೋಧಿಸಲಾಯಿತು.

| | | | |
|---|---|---|---|
| ಹೆಸರು | : | ಮಂಜುನಾಥ ಕೆ ಆರ್ | ಸಿ.ಡಬ್ಲ್ಯೂ–1 |
| ತಂದೆ/ ಗಂಡನ ಹೆಸರು | : | ಲೇಟ್ ರಾಮಚಂದ್ರ | ಪಿ.ಡಬ್ಲ್ಯೂ–1 |
| ವಯಸ್ಸು | : | 38 ವರ್ಷ | |
| ಉದ್ಯೋಗ | : | ಖಾಸಗಿ ಕೆಲಸ | |
| ವಾಸಸ್ಥಳ | : | ಕೋಟೆ ಕುಣಿಗಲ್, ತುಮಕೂರು ಜಿಲ್ಲೆ | ದಿಃ13–11–2025. |

### ಮುಖ್ಯ ವಿಚಾರಣೆ: ಮಾನ್ಯ ಎ.ಪಿ.ಪಿ. ರವರಿಂದಃ

ನ್ಯಾಯಾಲಯದ ಮುಂದಿರುವ ಆರೋಪಿತರು ನನಗೆ ಗೊತ್ತು. ಚಳ್ಳಕೆರೆ ನಗರ ವ್ಯಾಪ್ತಿಯಲ್ಲಿ ಯಾವುದೇ ಪರವಾನಿಗೆ ಹೊಂದದೆ ಗೋವುಗಳನ್ನು ವದೆ ಮಾಡುವ ಶೆಡ್ ಗಳನ್ನು ನಿರ್ಮಿಸಿರುವ ಬಗ್ಗೆ ದಿಃ22–05–2022 ರಂದು ನಾನು ಚಳ್ಳಕೆರೆ ನಗರದ ಶಾಂತಿನಗರದ ಶಾದಿಮಹಲ್ ನ ಅಕ್ಕಪಕ್ಕದ ರಸ್ತೆಗಳಲ್ಲಿ ಹೋಗಿ ನೋಡಲಾಗಿ 1 ಮತ್ತು 2 ನೇ ಆರೋಪಿತರು ಶಾದಿಮಹಲ್ ನ ಹತ್ತಿರ ಗೋವುಗಳನ್ನು ಹತ್ಯೆ ಮಾಡಲು ಶೆಡ್ ನ್ನು ನಿರ್ಮಿಸಿದ್ದು, ಶೆಡ್ ನ ಬಳಿ ಒಂದು ಹಸು ಕಂಡು ಬಂದಿರುತ್ತದೆ ಹಾಗೂ ಸದರಿ ಸ್ಥಳದಲ್ಲಿ ಗೋವುಗಳನ್ನು ವದೆ ಮಾಡಿದ್ದು, ರಕ್ತದ ಕಲೆಗಳು ಕಂಡು ಬಂದಿರುತ್ತವೆ. ಗೋವಿನ ರಕ್ತದ ನೀರು ಸದರಿ ಸ್ಥಳದಲ್ಲಿ ಹರಿದು ಪರಿಸರ ಮಾಲಿನ್ಯಕ್ಕೆ ತೊಂದರೆ ಉಂಟಾಗುತ್ತದೆ ಎಂಬ ಕಾರಣದಿಂದ ನಾನು ಅದೇ ದಿನ ಬೆಳಿಗ್ಗೆ 8–00 ಗಂಟೆಗೆ ಠಾಣೆಗೆ ಹೋಗಿ ದೂರನ್ನು ದಾಖಲಿಸಿರುತ್ತೇನೆ. ಸಾಕ್ಷಿಗೆ ದೂರನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ದೂರನ್ನು ನಿಪಿಃ1 ಅಂತ, ಸಾಕ್ಷಿಯ ಸಹಿಯನ್ನು ನಿಪಿಃ 1(ಎ) ಅಂತ ಗುರುತಿಸಲಾಯಿತು.

ನಂತರ ಠಾಣಾ ಸಿಬ್ಬಂದಿಗಳು ನಾನು, ಚಾಸಾ–2 ಮತ್ತು 3 ರವರು ಶಾದಿಮಹಲ್ ನ 1 ನೇ ಆರೋಪಿಯ ಮನೆಯ ಹತ್ತಿರ ಹೋಗಿದ್ದು, ಸದರಿ ಸ್ಥಳದಲ್ಲಿ 251 ತೂಕದ ಗೋಮಾಂಸವನ್ನು ವಶಪಡಿಸಿಕೊಂಡು ಸದರಿ ಗೋಮಾಂಸದಲ್ಲಿ ಒಂದು ಪ್ಲಾಸ್ಟಿಕ್ ಡಬ್ಬದಲ್ಲಿ ಒಂದು ಕೆ ಜಿ ಗೋವಿನ ಮಾಂಸ ಹಾಗೂ ಇನ್ನೊಂದು ಪ್ಲಾಸ್ಟಿಕ್ ಡಬ್ಬದಲ್ಲಿ ಗೋವಿನ ಎಲುಬಿನ ಮೂಳೆಯನ್ನು ಹಾಕಿ ಸಿ ಎನ್ ಎಂಬ ಅಕ್ಷರದಿಂದ ಸೀಲು ಹಾಕಿ ರಾಸಾಯನಿಕ ಪರೀಕ್ಷೆಗಾಗಿ ಜಪ್ತುಪಡಿಸಿಕೊಂಡಿರುತ್ತಾರೆ. ಸ್ಥಳದಲ್ಲಿ ಬಿಳಿ ಬಣ್ಣದ ಜೀವಂತ ಹಸುವನ್ನು, ತೂಕದ ಯಂತ್ರ, ಮಚ್ಚನ್ನು ವಶಪಡಿಸಿಕೊಂಡಿರುತ್ತಾರೆ. ಆಗ ಸಮಯ ಬೆಳಿಗ್ಗೆ 9–15 ರಿಂದ 10–15 ಆಗಿತ್ತು. ಸಾಕ್ಷಿಗೆ 1 ನೇ ಆರೋಪಿಯ ಮನೆಯ ಕಸಾಯಿ ಖಾನೆ ಸ್ಥಳದ ಮಹಜರನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಮಹಜರನ್ನು ನಿಪಿಃ2 ಅಂತ, ಸಾಕ್ಷಿಯ ಸಹಿಯನ್ನು ನಿಪಿಃ2(ಎ) ಅಂತ ಗುರುತಿಸಲಾಯಿತು.

ನಂತರ 10-35 ಕ್ಕೆ ಸಮಯದಲ್ಲಿ 2 ನೇ ಆರೊಪಿಯ ಮನೆಯ ಹತ್ತಿರ ನಾನು, ಚಾಸಾ-2 ಮತ್ತು ಚಾಸಾ-3 ಮತ್ತು ಸಿಬ್ಬಂದಿಗಳು ಹಾಗೂ ಪಶು ವೈದ್ಯರು ಹೋಗಿದ್ದು, ಸದರಿ ಸ್ಥಳದಲ್ಲಿ ಒಂದ ಹಸುವನ್ನು ಕಟಾವು ಮಾಡಿರುವುದು ಕಂಡು ಬಂದಿರುತ್ತದೆ. ಸದರಿ ಸ್ಥಳದಲ್ಲಿ ಒಂದು ಪ್ಲಾಸ್ಟಿಕ್ ಡಬ್ಬದಲ್ಲಿ ಒಂದು ಕೆ ಜಿ ಗೋವಿನ ಮಾಂಸ ಹಾಗೂ ಇನ್ನೊಂದು ಪ್ಲಾಸ್ಟಿಕ್ ಡಬ್ಬದಲ್ಲಿ ಗೋವಿನ ಎಲುಬಿನ ಮೂಳೆಯನ್ನು ಹಾಕಿ ಸಿ ಎನ್ ಎಂಬ ಅಕ್ಷರದಿಂದ ಸೀಲು ಹಾಕಿ ರಾಸಾಯನಿಕ ಪರೀಕ್ಷೆಗಾಗಿ ಜಪ್ತುಪಡಿಸಿಕೊಂಡಿರುತ್ತಾರೆ ಹಾಗೂ ಸದರಿ ಸ್ಥಳದಲ್ಲಿ 3 ತೂಕದ ಬಟ್ಟುಗಳು, ತೂಕದ ಯಂತ್ರ, 270 ಕೆ.ಜಿ.ಗೋಮಾಂಸ, ಅರ್ಧ ಚರ್ಮ ಸುಲಿದಿದ್ದ ಸುಮಾರು 300 ರಿಂದ 350 ಕೆ.ಜಿ ತೂಕದ ಹಸುವನ್ನು, ಚಾಕುವನ್ನು ವಶಪಡಿಸಿಕೊಂಡಿರುತ್ತಾರೆ. ಸಾಕ್ಷಿಗೆ 2 ನೇ ಆರೋಪಿಯ ಮನೆಯ ಕಸಾಯಿ ಖಾನೆ ಸ್ಥಳದ ಮಹಜರನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಮಹಜರನ್ನು ನಿಪಿಃ3 ಅಂತ, ಸಾಕ್ಷಿಯ ಸಹಿಯನ್ನು ನಿಪಿಃ3(ಎ) ಅಂತ ಗುರುತಿಸಲಾಯಿತು. ಆಗ ಸಮಯ ಬೆಳಿಗ್ಗೆ 10-35 ರಿಂದ 11-30 ಆಗಿತ್ತು.

ನಂತರ ಸಂಜೆ 4-30 ರಿಂದ 5-00 ಗಂಟೆ ಸಮಯದಲ್ಲಿ ಚಾಸಾ-2 ಮತ್ತು 3 ರವರ ಸಮಕ್ಷಮ ನಗರಸಭೆಯ ತ್ಯಾಜ ವಿಲೇವಾರಿ ಘಟಕದಲ್ಲಿ ಗೋಮಾಂಸವನ್ನು ಜೆ ಸಿ ಬಿ ಯಂತ್ರದಿಂದ ಗುಂಡಿ ತೆಗೆದು ಮಣ್ಣಿನಲ್ಲಿ ಹಾಕಿ ನಾಶಪಡಿಸಲಾಗಿರುತ್ತದೆ. ಸಾಕ್ಷಿಗೆ ಗೋಮಾಂಸವನ್ನು ನಾಶಪಡಿಸಿದ ಸ್ಥಳದ ಪಂಚನಾಮೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಪಂಚನಾಮೆಯನ್ನು ನಿಪಿಃ4 ಅಂತ, ಸಾಕ್ಷಿಯ ಸಹಿಯನ್ನು ನಿಪಿಃ4(ಎ) ಅಂತ ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ 1 ಮತ್ತು 2 ನೇ ಆರೋಪಿತರು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿಯು ನ್ಯಾಯಾಲಯದ ಮುಂದಿರುವ ಎಲೆಕ್ಟ್ರಿಕ್ ತೂಕದ ಯಂತ್ರ, ತಕ್ಕಡಿ, 3 ತೂಕದ ಬಟ್ಟುಗಳು, 2 ಮಚ್ಚು, 2 ಚಾಕುಗಳನ್ನು ನೋಡಿ ಮಹಜರ ಸಮಯದಲ್ಲಿ ಜಪ್ತುಪಡಿಸಿಕೊಳ್ಳಲಾದ ವಸ್ತುಗಳು ಎಂದು ಗುರುತಿಸಿದ ಮೇರೆಗೆ ಸದರಿ ವಸ್ತುಗಳನ್ನು ಕ್ರಮವಾಗಿ ಮು.ಮಾ-1 ರಿಂದ 9 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ ಆರ್ ಬಿ., ಆರೋಪಿತರ ಪರ ವಕೀಲರಿಂದಃ**

**(ಆರೋಪಿತರ ಪರ ವಕೀಲರು ಕಾಲಾವಕಾಶ ಕೋರಿದ್ದು ಯಾವುದೇ ಸಕಾರಣ ಕಂಡು ಬರದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು)**

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,

ನ್ಯಾಯಾಧೀಶರು, ಚಳ್ಳಕೆರೆ